ದಿಃ 08.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಹೆಚ್.ಕೆ.ಡಿ., ವಕೀಲರಿಂದ ಅರ್ಜಿದಾರರ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

2. ಪ್ರಥಮ ವರ್ತಮಾನ ವರದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ನನ್ನ ಹೇಳಿಕೆಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ಕೃತ್ಯ ನಡೆದ ಸ್ಥಳದ ಮಹಜರ್ ನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ತಕ್ಷೀರು ಸ್ಥಳದ ಕರಡು ನಕ್ಷೆಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ಅಮಾನತ್ತು ಮಹಜರ್ ನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ಸ್ವತ್ತಿನ ಪಟ್ಟಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ನನ್ನ ಹೇಳಿಕೆಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ಹೆಚ್.ಆರ್. ಸಂದೀಪ್ ರವರ ಹೇಳಿಕೆಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ಕೆ.ಹೆಚ್. ಮೊಹಮದ್ ಆರೀಫ್ ರವರ ಹೇಳಿಕೆಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು, ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.10 ಎಂದು ಗುರುತಿಸಲಾಯಿತು, Indemnity bond ನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು ಗುರುತಿಸಲಾಯಿತು, ಅಂತಿಮ ವರದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು, ವಾಹನಾ ತಪಾಸಣಾ ವರದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.13 ಎಂದು ಗುರುತಿಸಲಾಯಿತು,

ಕೆ.ಎ.18/ಬಿ.5688 ಆಟೋ ರಿಕ್ಷಾದ ಪರ್ಮಿಟ್ ನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.14 ಎಂದು ಗುರುತಿಸಲಾಯಿತು, ಸದರಿ ವಾಹನದ ವಾಯ್ಯು ಮಾಲೀನ್ಯದ ತಪಾಸಣಾ ವರದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.15 ಎಂದು ಗುರುತಿಸಲಾಯಿತು, 2 ನೇ ಎದುರುದಾರರ ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.16 ಎಂದು ಗುರುತಿಸಲಾಯಿತು, ಆಟೋ ರಿಕ್ಷಾದ ಆರ್.ಸಿ. ಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.17 ಎಂದು ಗುರುತಿಸಲಾಯಿತು, ಆಟೋ ರಿಕ್ಷಾದ ಪರ್ಮಿಟ್ ನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.18 ಎಂದು ಗುರುತಿಸಲಾಯಿತು, ಆಟೋ ರಿಕ್ಷಾದ fitness certificate ನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.19 ಎಂದು ಗುರುತಿಸಲಾಯಿತು, 1 ನೇ ಎದುರುದಾರರ ಚಾಲನಾ ಪರವಾನಿಗೆಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.20 ಎಂದು ಗುರುತಿಸಲಾಯಿತು, ತಿಳುವಳಿಕೆ ಪತ್ರದ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.21 ಎಂದು ಗುರುತಿಸಲಾಯಿತು, ಹೊರ ರೋಗಿ ಕಾರ್ಡು ನಿ.ಪಿ.22 ಎಂದು ಗುರುತಿಸಲಾಯಿತು, ನನ್ನ ಆಧಾರ್ ಕಾರ್ಡು ಹಾಜರು ಮಾಡಿದ್ದು ನಿ.ಪಿ.23 ಎಂದು ಗುರುತಿಸಲಾಯಿತು, ಪಾನ್ ಕಾರ್ಡು ಹಾಜರು ಮಾಡಿದ್ದು ನಿ.ಪಿ.24 ಎಂದು ಗುರುತಿಸಲಾಯಿತು, Disability I.D ಕಾರ್ಡು ಹಾಜರು ಮಾಡಿದ್ದು ನಿ.ಪಿ.25 ಎಂದು ಗುರುತಿಸಲಾಯಿತು, ನನ್ನ ಬ್ಯಾಂಕ್ ಪುಸ್ತಕವನ್ನು ಹಾಜರು ಮಾಡಿದ್ದು ನಿ.ಪಿ.26 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿಃ 04.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಹೆಚ್.ಕೆ.ಡಿ., ವಕೀಲರಿಂದ ಅರ್ಜಿದಾರರ ಪರವಾಗಿ

3. ಅಂಗನ್ಯೂನತೆಯ certificate ಅನ್ನು ಹಾಜರು ಮಾಡಿದ್ದು ನಿ.ಪಿ.27 ಎಂದು ಗುರುತಿಸಲಾಯಿತು, ವೆನ್ ಲಾಕ್ ಆಸ್ಪತ್ರೆಯಿಂದ ನೀಡಿರುವ ಹೊರ ರೋಗಿ ಚೀಟಿಯನ್ನು ಹಾಜರು ಮಾಡಿದ್ದು ನಿ.ಪಿ.28 ಎಂದು ಗುರುತಿಸಲಾಯಿತು, X-Ray ಅನ್ನು ಹಾಜರು ಮಾಡಿದ್ದು ನಿ.ಪಿ.29 ಎಂದು ಗುರುತಿಸಲಾಯಿತು, ಮೆಡಿಕಲ್ ಬಿಲ್ಲನ್ನು ಹಾಜರು ಮಾಡಿದ್ದು ನಿ.ಪಿ.30 ರಿಂದ ನಿ.ಪಿ.33 ಎಂದು ಗುರುತಿಸಲಾಯಿತು, ಆಂಬುಲೆನ್ಸ್ ಬಿಲ್ ನ್ನು ಹಾಜರು ಮಾಡಿದ್ದು ನಿ.ಪಿ.34 ರಿಂದ ನಿ.ಪಿ.36 ಎಂದು ಗುರುತಿಸಲಾಯಿತು, ವೆನ್ ಲಾಕ್ ಆಸ್ಪತ್ರೆಯಿಂದ ನೀಡಿದ ಹೊರ ರೋಗಿ ಚೀಟಿಯನ್ನು ಹಾಜರು ಮಾಡಿದ್ದು ನಿ.ಪಿ.37 ಎಂದು ಗುರುತಿಸಲಾಯಿತು, ಮೂಳೆ ಮತ್ತು ಕೀಲು ಪಂಡಿತರು ನೀಡಿರುವ ಔಷಧಿ ತೆಗೆದುಕೊಳ್ಳುವ ಚೀಟಿಯನ್ನು ಹಾಜರು ಮಾಡಿದ್ದು ನಿ.ಪಿ.38 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಸಿ.ಸಿ., ವಕೀಲರಿಂದ **1, 3** ಮತ್ತು **4** ನೇ ಎದುರುದಾರರ ಪರವಾಗಿ

4. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ನೀಡಲಾಗಿದೆ.

ಪಾಟೀ ಸವಾಲು ಶ್ರೀ ಎಂ.ವೈ.ಎಸ್ ವಕೀಲರಿಂದ **2** ನೇ ಎದುರುದಾರರ ಪರವಾಗಿ

5. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ನೀಡಲಾಗಿದೆ...

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 17.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಂ.ವೈ.ಎಸ್ ವಕೀಲರಿಂದ **4** ನೇ ಎದುರುದಾರರ ಪರವಾಗಿ

6. 1 ಮತ್ತು 2 ನೇ ಎದುರುದಾರರು ಸಹೋದರರು ಆಗಿರುತ್ತಾರೆ. ಅಪಘಾತಕ್ಕೆ ಒಳಪಟ್ಟ ಆಟೋ 1 ನೇ ಎದುರುದಾರರಿಗೆ ಸೇರಿರುತ್ತದೆ. 1 ನೇ ಎದುರುದಾರರೇ ಅಪಘಾತದ ದಿನ ಆಟೋವನ್ನು ಚಲಾಯಿಸುತ್ತಿದ್ದರು. ಅಪಘಾತದ ಸಮಯದಲ್ಲಿ 2 ನೇ ಎದುರುದಾರರು ಸದರಿ ಆಟೋದಲ್ಲಿ ಇದ್ದರು ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ಅಪಘಾತದಲ್ಲಿ ಗಾಯವಾಗಿರುತ್ತದೆ. 1 ನೇ ಎದುರುದಾರರು ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಪಘಾತವಾದ ನಂತರ ನನ್ನನ್ನು ಮೂಡಿಗೆರೆಯ ಎಂ.ಜಿ.ಎಂ ಆಸ್ಪತ್ರೆಗೆ ಪ್ರಥವು ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ, ನಂತರ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತವಾದ ನಂತರ ನನ್ನನ್ನು ನನ್ನ ತಾಯಿ ಮತ್ತು ಅಂಬುಲೆನ್ಸ್ ಚಾಲಕ ಆರೀಫ್ ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. 1 ಮತ್ತು 2 ನೇ ಎದುರುದಾರರು ನನ್ನ ಪರಿಚಯಸ್ಥರು ಮತ್ತು ಸ್ನೇಹಿತರು ಎಂದರೆ ಸರಿಯಲ್ಲ. ನನಗೆ ಅಪಘಾತವಾಗಿರುವ ಬಗ್ಗೆ ನನ್ನ ಕುಟುಂಬದವರಿಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಅಪಘಾತವಾದ ತಕ್ಷಣ ಪೊಲೀಸರಿಗೆ ದೂರು ನೀಡಲು ನನ್ನ ಕುಟುಂಬಸ್ಥರಿಗೆ ಮತ್ತು 1 ಮತ್ತು 2 ನೇ ಎದುರುದಾರರಿಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಅಪಘಾತದ ಬಗ್ಗೆ ನಾನು ವೈದ್ಯರಿಗೆ ತಿಳಿಸಿರುತ್ತೇನೆ. ಅಪಘಾತದ ಸಮಯದಲ್ಲಿ ನನಗೆ 18 ವರ್ಷ ಆಗಿತ್ತು. ಅಪಘಾತವಾದ ನಂತರ ನಾನು ಹೆಚ್ಚಿನ ಚಿಕಿತ್ಸೆಯನ್ನು ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ ಎಂದರೆ ಸರಿ. ಸದರಿ ಆಸ್ಪತ್ರೆ ಸರ್ಕಾರಿ ಆಸ್ಪತ್ರೆ ಎಂದರೆ ಸರಿ. ಸದರಿ ಅಪಘಾತದಿಂದ ನಾನು ಒಂದು ವರೆ ತಿಂಗಳು ಒಳರೋಗಿಯಾಗಿ ದಾಖಲಾಗಿರುತ್ತೇನೆ. ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ನಾನು ಚಿಕಿತ್ಸೆಗಾಗಿ ಪುನಃ ಆಸ್ಪತ್ರೆಗೆ ಹೋಗುತ್ತಿದ್ದೆನು. ಆ ಬಗ್ಗೆ ದಾಖಲಾತಿಯನ್ನು ಹಾಜು

ಮಾಡಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ವೆನ್ ಲಾಕ್ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುತ್ತಾರೆ ಎಂದರೆ ಸಾಕ್ಷಿಯು ಔಷಧಿಯನ್ನು ಹೊರಗಡೆಯಿಂದಲು ತರಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತದಿಂದ ಆದ ಚಿಕಿತ್ಸೆಗಾಗಿ ನಾನು ಸುಮಾರು ರೂ.1,50,000-00 ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನು ದ್ವಿತೀಯ ಪಿ.ಯು.ಸಿ ವಿಧ್ಯಾಭ್ಯಾಸ ಮಾಡುತ್ತಿದ್ದೆನು. ನನಗೆ ತಿಂಗಳಿಗೆ ರೂ.20,000-00 ಆಧಾಯ ಇತ್ತು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಪಘಾತದ ಸಮಯದಲ್ಲಿ ವಿಧ್ಯಾರ್ಥಿಯಾದ ಕಾರಣ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಖಾಸಗಿ ರೆಸಾರ್ಟ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆನು ಎಂದು ನುಡಿಯುತ್ತಾರೆ. ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ಅಪಘಾತದ ನಂತರ ನಾನು ಒಂದೇ ಬಾರಿ ಊರುಗೋಲನ್ನು ಖರೀದಿ ಮಾಡಿರುತ್ತೇನೆ. ನಾನು ಒಂದೇ ಬಾರಿ ಊರುಗೋಲನ್ನು ಖರೀದಿ ಮಾಡಿದ್ದರು ಸಹ ನಿ.ಪಿ.30 ಮತ್ತು 31 ರಂತೆ ಎರಡು ಬಿಲ್ಲುಗಳನ್ನು ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.34 ಅಂಬುಲೆನ್ಸ್ ಬಿಲ್ಲಿನಲ್ಲಿ ಪ್ರಯಾಣ ಮಾಡಿರುವ ಬಗ್ಗೆ ದಿನಾಂಕ ನಮೂದು ಮಾಡಿರುವುದಿಲ್ಲ ಮತ್ತು ಎಲ್ಲಿಂದ ಎಲ್ಲಿಗೆ ಪ್ರಯಾಣ ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.36 ದಾಖಲಾತಿಯಲ್ಲಿ ನಮೂದು ಮಾಡಿದ ದಿನಾಂಕದಂದು ನಾನು ಬಸ್ಸಿನಲ್ಲಿ ಓಡಾಡುವ ಸ್ಥಿತಿಯಲ್ಲಿ ಇದ್ದೆನು ಎಂದರೆ ಸರಿಯಲ್ಲ. ನಿ.ಪಿ.27 ಅಂಗನ್ಯೂನತೆಯ ಸರ್ಟಿಫಿಕೇಟ್ ಅನ್ನು ಈ ಪ್ರಕರಣದಲ್ಲಿ ಹೆಚ್ಚಿನ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾಖಲಾತಿಯನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಒಳಪಟ್ಟ ಆಟೋ ರಿಕ್ಷಾಕ್ಕೆ ಯಾವುದೇ ದಾಖಲಾತಿ ಇರದ ಕಾರಣ

4 ನೇ ಎದುರುದಾರರು ಅರ್ಜಿಯಲ್ಲಿ ಕೇಳಿದಂತೆ ಯಾವುದೇ ಪರಿಹಾರವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಕೆ.ಸಿ.ಸಿ., ವಕೀಲರಿಂದ **1** ರಿಂದ **3** ನೇ ಎದುರುದಾರರ ಪರವಾಗಿ

7. 4 ನೇ ಎದುರುದಾರರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ